**ದಿನಾಂಕಃ 04-01-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ ಪಿ.ಸಿ.ಎಸ್. ವಕೀಲರಿಂದಃ**

ದಾವಾ ಸರ್ವೆ ನಂ. 35 ಮತ್ತು 36 ಕದರಮಂಡಲಗಿ ಗ್ರಾಮದ ಆಸ್ತಿಗಳು ಯಾವಾಗ ಪೊಡು ಆಗಿರುತ್ತವೆ ಎಂದು ನನಗೆ ಗೊತ್ತಿರುವುದಿಲ್ಲ. ನಮ್ಮ ತಂದೆ ಸುಮಾರು 10 ವರ್ಷ ಗ್ರಾಮದಲ್ಲಿ ಇಲ್ಲದಾಗ ಪ್ರತಿವಾದಿಗಳು ಖೊಟ್ಟಿ ದಾಖಲಾತಿಗಳನ್ನು ಸೃಷ್ಟಿಸಿಕೊಂಡು ಆಸ್ತಿಗಳನ್ನು ಪೋಡು ಮಾಡಿರುತ್ತಾರೆ. ಈಗ್ಗೆ ಪೋಡು ಮಾಡಿ ಸುಮಾರು 15-20 ವರ್ಷ ಆಗಿರಬಹುದು. ನಮ್ಮ ತಂದೆ 10 ವರ್ಷ ಗ್ರಾಮದಲ್ಲಿ ಇರಲಿಲ್ಲ ಎಂದು ನಾನು ಹೇಳಿರುವುದು ಯಾವ ವರ್ಷ ಎಂದು ಹೇಳಲಾಗುವುದಿಲ್ಲ. ಈ ವಿಷಯವನ್ನು ನಮ್ಮ ದಾವೆಯಲ್ಲಿ ಬರೆಸಿರುವುದಿಲ್ಲ. ಈಗ್ಗೆ ಸುಮಾರು 15-20 ವರ್ಷದ ಹಿಂದೆ ನನಗೆ ಪೋಡು ಆದ ವಿಷಯ ತಿಳಿದಿರುತ್ತದೆ. ಪೋಡು ಆಗಿದ್ದನ್ನು ನಾನು ಸಂಬಂಧಪಟ್ಟ ಪ್ರಾಧಿಕಾರದಲ್ಲಿ ಪ್ರಶ್ನಿಸಿರುವುದಿಲ್ಲ. ನನ್ನ ತಂದೆ ಮತ್ತು ಪ್ರತಿವಾದಿಯರು ಹಿಸ್ಸೆ ಆದಾಗ ದಾವಾ ಆಸ್ತಿಗಳು ಪೋಡು ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ಗೊತ್ತಿಲ್ಲದ ಹಾಗೇ ಪ್ರತಿವಾದಿಗಳು ಪೋಡು ಮಾಡಿಕೊಂಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ಅವರ ಸಹೋದರರ ಮಧ್ಯೆ 1979 ರಲ್ಲಿ ವಾಟ್ನಿ ಆಗಿರುತ್ತದೆ ಎಂದರೆ ಸರಿಯಲ್ಲ. ಆ ವಾಟ್ನಿ ಪ್ರಕಾರ ಸರ್ವೆ ನಂ. 35 ಮತ್ತು 36 ಪೋಡು ಆಗಿರುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂ. 35, 35/1, 35/2, 35/3 ಎಂದು ಪೋಡು ಆಗಿರುತ್ತದೆ ಎಂದರೆ ನಿಜ. ಸರ್ವೆ ನಂ. 35/1 06 ಎಕರೆ 14 ಗುಂಟೆ ಚಂದ್ರಶೇಖರ ಗಂಗಾಧರಪ್ಪ ಮುದ್ದಣ್ಣನವರಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂ. 35/2 07 ಎಕರೆ ನನ್ನ ತಂದೆ ಹೆಸರಿಗೆ ಬಂದಿರುತ್ತದೆ ಎಂದರೆ ನಿಜ. ಸರ್ವೆ ನಂ. 35/3 03 ಎಕರೆ 31 ಗುಂಟೆ ಮಲ್ಲವ್ವ ಕೋಂ ಗಂಗಾಧರಪ್ಪ ಮುದ್ದಣ್ಣನವರಿಗೆ ಬಂದಿರುತ್ತದೆ ಎಂದರೆ ನಿಜ. ಸರ್ವೆ ನಂ. 36, 36/1 ಮತ್ತು 36/2 ಎಂದು ಪೋಡಾಗಿರುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂ. 36/1 05 ಎಕರೆ 26 ಗುಂಟೆ ಚಂದ್ರಶೇಖರ

ಗಂಗಾಧರಪ್ಪ ಮುದ್ದಣ್ಣನವರಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂ. 36/2 08 ಎಕರೆ ಪಾಂಡುರಂಗಪ್ಪ ದತ್ತಕ ತಂದೆ ಖಂಡೆಪ್ಪ ಮುದ್ದಣ್ಣನವರಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ಈ ಎರಡೂ ಸರ್ವೆ ಪೋಡಿ ಆದ 35/1, 35/2, 35/3 ಹಾಗೂ 36/1, 36/2 ತೋರಿಸಿರುವುದಿಲ್ಲ ಎಂದರೆ ನಿಜ. 2006 ರಲ್ಲಿ ಪಾಂಡುರಂಗಪ್ಪ ಮೃತಪಟ್ಟಿರುತ್ತಾರೆ. ಅವರು ತೀರಿಕೊಂಡ ನಂತರ ಅವರ ಹೆಂಡತಿ-ಮಕ್ಕಳು ಸರ್ವೆ ನಂ. 36, 08 ಎಕರೆ ಜಮೀನನ್ನು ಅವರ ಹೆಸರಿಗೆ ಖಾತೆ ಬದಲಾವಣೆ ಮಾಡಿಕೊಂಡರು ಎಂದರೆ ನಮಗೆ ಗೊತ್ತಿಲ್ಲದ ಹಾಗೇ ಮಾಡಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. ನಮಗೆ ತಿಳಿದ ನಂತರ ಸದರಿ ಮುಟೇಶನನ್ನು ನಾವು ಪ್ರಶ್ನೇ ಮಾಡಿ ವ್ಯಾಜ್ಯ ಮಾಡಿರುವುದಿಲ್ಲ. 1979 ರಲ್ಲಿಯೇ ದಾವಾ ಆಸ್ತಿಗಳು ಹಿಸ್ಸೆ ಆಗಿರುವುದರಿಂದ ನಾನು ಎಲ್ಲಿ ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ 36/1 ನಮ್ಮ ತಂದೆಯ ಹೆಸರಿಗೆ ಬಂದ ಜಮೀನಿನ ಮೇಲೆ ನಾವು ಸಾಲ ಪಡೆದಿರುತ್ತೇವೆ ಎಂದರೆ ಸಾಕ್ಷಿ ಇತ್ತಿಚೆಗೆ ಪಡೆದಿರುತ್ತೇವೆ ಎಂದು ಹೇಳುತ್ತಾರೆ. ಪಾಂಡುರಂಗಪ್ಪ ಜೀವಿತ ಕಾಲದಲ್ಲಿ ಅವರ ಹಿಸ್ಸೆಗೆ ಬಂದ ಆಸ್ತಿಯ ಮೇಲೆ ಸಾಲ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಇತ್ತೀಚೆಗೆ ಅವರ ಹೆಂಡತಿ-ಮಕ್ಕಳು ಸಾಲ ಪಡೆದಿರುತ್ತಾರೆ. ನಾನು ಸಂಬಂಧಪಟ್ಟ ಸೊಸೈಟಿ ಮತ್ತು ಬ್ಯಾಂಕಿನಲ್ಲಿ ನಮಗೆ ಆಸ್ತಿಯಲ್ಲಿ ಹಿಸ್ಸೆ ಇದೆ ಸಾಲ ಕೊಡಬೇಡಿ ಎಂದು ತಕರಾರು ಸಲ್ಲಿಸಿರುವುದಿಲ್ಲ. ಸದರಿ ಜಮೀನು ಅವರ ಹಿಸ್ಸೆಗೆ ಸಂಪೂರ್ಣ ಹೋದ ಕಾರಣ ನಾನು ತಕರಾರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 16 ರಿಂದ 19 ರವರ ಹೆಸರಿಗಿರುವ ಆಸ್ತಿ ನಮಗೆ ಸೇರಿದ ಆಸ್ತಿ ಇರುವುದರಿಂದ ಅವರನ್ನು ಪಕ್ಷಗಾರನ್ನಾಗಿ ಮಾಡಿರುತ್ತೇವೆ. 1986-87 ರಲ್ಲಿ ಆಸ್ತಿಗಳು ಪ್ರತಿವಾದಿ 16 ರಿಂದ 19 ರ ಹೆಸರಿಗೆ ಆಗಿರುತ್ತವೆ. ಅವರಿಗೆ ನಮಗೆ ತಿಳಿದ ಹಾಗೇ ನಮ್ಮ ತಾಯಿ ಆಸ್ತಿಯನ್ನು ಮಾರಾಟ ಮಾಡಿದ್ದರಿಂದ ಅವರ ಹೆಸರಿಗೆ ಆಗಿರುತ್ತವೆ. ಸದರಿ ಕ್ರಯ ಪತ್ರಗಳನ್ನು ನಾವು ಈ ನ್ಯಾಯಾಲಯದಲ್ಲಿ ಬಿಟ್ಟರೆ ಬೇರೆ ಎಲ್ಲಿ ಪ್ರಶ್ನೇ ಮಾಡಿರುವುದಿಲ್ಲ. 1990 ರಲ್ಲಿ ನಮ್ಮ ತಾಯಿ ಆಸ್ತಿಯನ್ನು ಮಾರಾಟ ಮಾಡಿದ ವಿಷಯ ನಮಗೆ ತಿಳಿದಿರುತ್ತದೆ. 1984 ರಲ್ಲಿ ನಮ್ಮ ತಾಯಿ ಆಸ್ತಿ ಮಾರಾಟ ಮಾಡಿದ್ದು ಆಗಲೇ ನಮಗೆ ವಿಷಯ ತಿಳಿದಿತ್ತು ಎಂದರೆ ಸರಿಯಲ್ಲ.

**<u>ಮುಂದುವರೆದ ಪಾಟೀ ಸವಾಲುಃ</u>**

ಕೋರಿಕೆ ಮೇರೆಗೆ ಮುಂದೂಡಲಾಗಿದೆ.

(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**).

ಓ.ಹೇ.ಕೆ.ಸರಿ ಇದೆ.

**Sd/-**

ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ, ಬ್ಯಾಡಗಿ.